## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಹೆಚ್.ಎನ್. ನಾಗರಾಜು, ಅಧ್ಯಕ್ಷರು, ಈಚನೂರು ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು – ಆದೇಶ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1135 ಗ್ರಾಪಂಅ 2018, ದಿನಾಂಕ: 02.02.2019.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ರವರ ಪತ್ರ ಸಂಖ್ಯೆ: ಗ್ರಾಅಪ 373 ಗ್ರಾಪಂಕಾ 2017, ದಿನಾಂಕ:18.03.2019.
3. ಪ್ರಾದೇಶಿಕರ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ: ಪ್ರಾಆಕ/ಅಭಿವೃದ್ಧಿ/ಸಿಆರ್/30/2019–20, ದಿನಾಂಕ:21.01.2020.

**ಪ್ರಸ್ತಾವನೆ:**

ಶ್ರೀ ಹೆಚ್.ಎನ್. ನಾಗರಾಜು, ಅಧ್ಯಕ್ಷರು, ಈಚನೂರು ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ರವರು ಈಚನೂರು ಗ್ರಾಮ ಪಂಚಾಯಿತಿಯಲ್ಲಿ ಮಾಡಿರುವ ಅವ್ಯವಹಾರಗಳ ಬಗ್ಗೆ ಉಲ್ಲೇಖ (1) ಮತ್ತು (2) ರ ಆದೇಶಗಳ ಸೂಚನೆಯಂತೆ ವಿಚಾರಣೆ ನಡೆಸಲು ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರಿಗೆ ನಿರ್ದೇಶನ ನೀಡಲಾಗಿತ್ತು. ಅದರಂತೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರು ಆರೋಪಿತ ಅಧ್ಯಕ್ಷರ ವಿರುದ್ಧ ಇದಂತಹ ಆರೋಪಗಳ ಬಗ್ಗೆ ವಿಚಾರಣೆ ಮಾಡಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ 1993 ರ ಪ್ರಕರಣ 48(4) ಮತ್ತು 48(5) ರನ್ವಯ ಕ್ರಮ ಜರುಗಿಸುವಂತೆ ಮೇಲೆ ಓದಲಾದ (3) ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ (3) ರಲ್ಲಿ ಓದಲಾದ ಪತ್ರದಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಹಾಗೂ ವಿಚಾರಣಾಧಿಕಾರಿಗಳು ರವರು ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ಈಚನೂರು ಗ್ರಾಮ ಪಂಚಾಯಿತಿಯಲ್ಲಿ ಒಂದೇ ಓಚರ್‌ಗೆ ಎರಡು ಬಾರಿ ಬಿಲ್ ಮಾಡಿ ಹಣ ದುರುಪಯೋಗಪಡಿಸಿಕೊಂಡಿರುವ ಪ್ರಕರಣದಲ್ಲಿ ಆರೋಪಿತರಾದ (1) ಶ್ರೀ ಅನಂತಕುಮಾರ್, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಈಚನೂರು ಹಾಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಜಗೂರು ಗ್ರಾಮ ಪಂಚಾಯಿತಿ, (2) ಶ್ರೀ ಶಿವಣ್ಣ, ಕಾರ್ಯದರ್ಶಿ, ಈಚನೂರು ಗ್ರಾಮ ಪಂಚಾಯಿತಿ ಮತ್ತು (3) ಶ್ರೀ ಹೆಚ್.ಎನ್. ನಾಗರಾಜು, ಅಧ್ಯಕ್ಷರು, ಈಚನೂರು ಗ್ರಾಮ ಪಂಚಾಯಿತಿ, ರವರುಗಳು ಒಟ್ಟಾಗಿ ಶಾಮೀಲಾಗಿದ್ದು, ಇವರುಗಳ ಮೇಲಿನ ಭ್ರಷ್ಟಾಚಾರದ ಆಪಾದನೆಗಳ ಮೇಲೆ ಲೋಕಾಯುಕ್ತ ಠಾಣೆ ಮೊಕದ್ದಮೆ ಸಂಖ್ಯೆ:20/2014 ಕಲಂ 8, 13(1)(ಸಿ) ಜೊತೆಗೆ 13(2) ಪಿ.ಸಿ. ಆಕ್ಟ್ 1988 ಮತ್ತು 468, 420 ರ ಜೊತೆಗೆ 34 ಐ.ಪಿ.ಸಿ. ರಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಂಡಿರುವುದರಿಂದ ಸದರಿ ಪ್ರಕರಣವು ತುಮಕೂರು ಲೋಕಾಯುಕ್ತ ನ್ಯಾಯಾಲಯದಲ್ಲಿದ್ದು, ಪ್ರಕರಣ ಇತ್ಯರ್ಥವಾಗುವವರೆಗೂ ಯಾವುದೇ ರೀತಿಯ ವರದಿಗಳನ್ನಾಗಲಿ ನೀಡಲು ಬರುವುದಿಲ್ಲವೆಂದು ದಿನಾಂಕ:16.11.2019 ರಂದು ಪ್ರಾದೇಶಿಕ ಆಯುಕ್ತರು, ಕಛೇರಿಯಲ್ಲಿ ಲಿಖಿತ ಹೇಳಿಕೆ ದಿನಾಂಕ:06.12.2019 ರ ವಿಚಾರಣೆ ವೇಳೆಯಲ್ಲಿ ಹೇಳಿಕೆ ನೀಡಿರುತ್ತಾರೆ.

ಮಾನ್ಯ ಲೋಕಾಯುಕ್ತರ ತನಿಖಾ ವರದಿಯನ್ನು ಪರಿಶೀಲಿಸಲಾಗಿ, ಶ್ರೀ ಹೆಚ್.ಎನ್. ನಾಗರಾಜು, ಅಧ್ಯಕ್ಷರು, ಈಚನೂರು ಗ್ರಾಮ ಪಂಚಾಯಿತಿ, ಸದರಿ ಪ್ರಕರಣದಲ್ಲಿ ಶಾಮೀಲಾಗಿ ಭ್ರಷ್ಟಾಚಾರ ಆಪಾದನೆಯಿರುವುದು ಕಂಡು ಬಂದಿರುತ್ತದೆ. ಮುಂದುವರೆದು ಶ್ರೀ ಹೆಚ್.ಎನ್. ನಾಗರಾಜು, ಅಧ್ಯಕ್ಷರು, ಈಚನೂರು ಗ್ರಾಮ ಪಂಚಾಯಿತಿ, ರವರು ಪ್ರಕರಣ ತನಿಖೆಗೆ ಅಡ್ಡಿ ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ), 48(4) ಮತ್ತು 48(5) ರನ್ವಯ ಕ್ರಮ ಜರುಗಿಸಬಹುದಾಗಿರುತ್ತದೆ. ಸದರಿ ಪ್ರಕರಣದಲ್ಲಿನ ಉಳಿದ ಆರೋಪಿತರುಗಳಾದ (1) ಶ್ರೀ ಅನಂತಕುಮಾರ್, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಈಚನೂರು ಹಾಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಜಗೂರು ಗ್ರಾಮ ಪಂಚಾಯಿತಿ, (2) ಶ್ರೀ ಶಿವಣ್ಣ, ಕಾರ್ಯದರ್ಶಿ, ಈಚನೂರು ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು ರವರುಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪ್ರಕರಣ ಪರಿಶೀಲಿಸಲಾಗಿ, ಶ್ರೀ ಹೆಚ್.ಎನ್. ನಾಗರಾಜು, ಅಧ್ಯಕ್ಷರು, ಈಚನೂರು ಗ್ರಾಮ ಪಂಚಾಯಿತಿ, ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 48(4) ಮತ್ತು 48(5) ರನ್ವಯ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಲು ಹಾಗೂ ಸದರಿ ಅಧಿನಿಯಮದ ಪ್ರಕರಣ 157(2) ಮತ್ತು 246(8) ರಡಿ ದುರುಪಯೋಗಪಡಿಸಿಕೊಂಡಿರುವ ಮೊತ್ತವನ್ನು ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಭೂ ಕಂದಾಯ ಬಾಕಿಯೆಂದು ವಸೂಲಿ ಮಾಡಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ತಿಪಟೂರು, ತುಮಕೂರು ಜಿಲ್ಲೆ ರವರಿಗೆ ಆದೇಶಿಸುವುದು ಪ್ರಕರಣದ ಉಳಿದ ಆರೋಪಿಗಳಾದ (1) ಶ್ರೀ ಅನಂತಕುಮಾರ್, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಈಚನೂರು ಹಾಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಜಗೂರು ಗ್ರಾಮ ಪಂಚಾಯಿತಿ, (2) ಶ್ರೀ ಶಿವಣ್ಣ, ಕಾರ್ಯದರ್ಶಿ, ಈಚನೂರು ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು ರವರುಗಳ ವಿರುದ್ಧ ನಿಯಮನುಸಾರ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ ರವರಿಗೆ ತಿಳಿಸಲು ಸರ್ಕಾರವು ತೀರ್ಮಾನಿಸಿದೆ.

ಅದರಂತೆ, ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/106/ಗ್ರಾಪಂಅ/2020**
**ಬೆಂಗಳೂರು, ದಿನಾಂಕ:25-02-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಹೆಚ್.ಎನ್. ನಾಗರಾಜು, ಅಧ್ಯಕ್ಷರು, ಈಚನೂರು ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 48(4) ಮತ್ತು 48(5) ರನ್ವಯ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿದೆ ಹಾಗೂ ಸದರಿ ಅಧಿನಿಯಮದ ಪ್ರಕರಣ 157(2) ಮತ್ತು 246(8) ರಡಿ ದುರುಪಯೋಗಪಡಿಸಿಕೊಂಡಿರುವ ಮೊತ್ತವನ್ನು ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಭೂ ಕಂದಾಯ ಬಾಕಿಯೆಂದು ವಸೂಲಿ ಮಾಡಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ತಿಪಟೂರು, ತುಮಕೂರು ಜಿಲ್ಲೆ ರವರಿಗೆ ಆದೇಶಿಸಿದೆ. ಈ ಪ್ರಕರಣದ ಉಳಿದ ಆರೋಪಿಗಳಾದ (1) ಶ್ರೀ ಅನಂತಕುಮಾರ್, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಈಚನೂರು ಹಾಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಜಗೂರು ಗ್ರಾಮ ಪಂಚಾಯಿತಿ, (2) ಶ್ರೀ ಶಿವಣ್ಣ, ಕಾರ್ಯದರ್ಶಿ, ಈಚನೂರು ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು ರವರುಗಳ ವಿರುದ್ಧ ನಿಯಮನುಸಾರ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ ರವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 25/02/2020
(ನವೀನ್‌ಕುಮಾರ್ ಬಿ.)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

25.2.2020

**ಗೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ.
2) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ತಿಪಟೂರು, ತುಮಕೂರು ಜಿಲ್ಲೆ.
3) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಈಚನೂರು/ಬಜಗೂರು ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.
4) ಸಂಬಂಧಿಸಿದವರಿಗೆ (ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ತಿಪಟೂರು, ತುಮಕೂರು ಜಿಲ್ಲೆ ರವರ ಮುಖಾಂತರ)
5) ಗಣಕ ಕೋಶ.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.